**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 3971 / 2023**

ಸಿ.ಡಬ್ಲ್ಯೂ :- 02 / ಪಿ.ಡಬ್ಲ್ಯೂ :- 01

| | |
|---|---|
| ಹೆಸರು | **ಗೌರಿಶಂಕರ್** |
| ತಂದೆ ಹೆಸರು | **ರಾಮಯ್ಯ** |
| ವಯಸ್ಸು | **33 ವರ್ಷ** |
| ವೃತ್ತಿ | **ಪ್ಲಂಬಿಂಗ್ ಕೆಲಸ** |
| ವಾಸಸ್ಥಳ | **ಬೆಂಗಳೂರು** |

**ದಿನಾಂಕ: 31-07-2026** ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ನನಗೆ ಗಂಗರಾಜು, ಚಾಸಾ-3 ರವರ ಪರಿಚಯ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗಂಗರಾಜು ಎಂದು ಯಾರು ಗೊತ್ತಿರುವುದಿಲ್ಲ, ಆದರೆ ಚಾಸಾ-3 ರವರ ಪರಿಚಯ ಇರುತ್ತದೆ. ಮೃತ ಉಮೇಶ ರವರ ಪರಿಚಯ ನನಗೆ ಇರುವುದಿಲ್ಲ. ನಾನು ಮತ್ತು ಚಾಸಾ-3 ರವರು ಬೆಂಗಳೂರಿನಿಂದ ಕೆಲಸ ಮುಗಿಸಿಕೊಂಡು ಕೊನೆಯ ಬಸ್ಸಿಗೆ ಮಾಗಡಿಗೆ ಬಂದಿದ್ದು, ನಂತರ ನನ್ನ ಹೆಂಡತಿಯ ತಮ್ಮನಾದ ಆದಿತ್ಯ ರವರಿಗೆ ಕರೆ ಮಾಡಿ ಗಾಡಿಯನ್ನು ತೆಗೆದುಕೊಂಡು ಬಾ ಎಂದು ಹೇಳಿದ್ದು, ಆತ ಬರುವುದು ತಡವಾದ ಕಾರಣದಿಂದ ನಾವು ನಡೆದುಕೊಂಡು ಹೋಗುತ್ತಿದ್ದೇವು, ನಾವು ಮಾಗಡಿ ಬಸ್ ನಿಲ್ದಾಣದಿಂದ ವಿಠಲಪುರಕ್ಕೆ ನಡೆದುಕೊಂಡು ಹೋಗುತ್ತಿರುವಾಗ ನಮ್ಮ ಹಿಂದೆಯಿಂದ ಒಂದು ದ್ವಿಚಕ್ರ ವಾಹನ ಬಂದು ನನಗೆ ಮತ್ತು ಚಾಸಾ-3 ರವರಿಗೆ ಹಿಂದೆಯಿಂದ ಡಿಕ್ಕಿ ಪಡಿಸಿರುತ್ತಾರೆ. ಸದರಿ ದ್ವಿಚಕ್ರ ವಾಹನ ನಮ್ಮ ಹಿಂದೆಯಿಂದ ಬರುತ್ತಿದ್ದ ಕಾರಣ ಅದು ಹೇಗೆ ಬರುತ್ತಿತ್ತು ಎಂದು ಹೇಳಲು ಆಗುವುದಿಲ್ಲ. ಅಪಘಾತದ ಪರಿಣಾಮ ನನಗೆ ಕಾಲಿಗೆ ಪೆಟ್ಟಾಗಿದ್ದು, ಚಾಸಾ-3 ರವರಿಗೂ ಕೂಡ ಕಾಲಿಗೆ ಪೆಟ್ಟಾಗಿರುತ್ತದೆ. ನಂತರ ನಮಗೆ ಪ್ರಜ್ಞೆ ಹೋಗಿದ್ದು, ನಂತರ ಬೆಂಗಳೂರಿನ ಆಸ್ಪತ್ರೆಯಲ್ಲಿ ನಮಗೆ ಪ್ರಜ್ಞೆ ಬಂದಿರುತ್ತದೆ. ದ್ವಿಚಕ್ರ ವಾಹನದ ಚಾಲಕನನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು** :- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಪರವಾಗಿ :-**

ದಿನಾಂಕಃ 08-02-2023 ರಂದು ನಾನು ಮತ್ತು ಚಾಸಾ-3 ಹಾಗೂ ಆರೋಪಿಯಾದ ಗಂಗರಾಜು ರವರು ಒಟ್ಟಾಗಿ ಮೂರು ಜನ ಒಂದೇ ಗಾಡಿಯಲ್ಲಿ ಹೋಗೋಣ ಎಂದು ಮಾತನಾಡಿಕೊಂಡು 3 ಜನ ಚಾಸಾ-3 ರವರ ಅಣ್ಣನ ಮೋಟಾರ್ ( ಪಲ್ಸರ್ ) ವಾಹನ ಕೆಎ-02-ಜೆಎಂ-0621 ಪಲ್ಸರ್ ಬೈಕಿನಲ್ಲಿ ಕುಳಿತುಕೊಂಡು ಆರೋಪಿ ವಾಹನವನ್ನು ಚಾಲನೆ ಮಾಡುತ್ತಿದ್ದು, ನಾವು ಹಿಂದೆ ಕುಳಿತ್ತಿದ್ದು ಹೋಗುತ್ತಿದ್ದು ರಾತ್ರಿ 9.30 ರ ಸಮಯಕ್ಕೆ ವಿಠಲಪುರಕ್ಕೆ ಹೊರಟು ಮಾಗಡಿ ಕುಣಿಗಲ್ ರಸ್ತಗೆ ಬರುತ್ತಿರುವಾಗ ಆರೋಪಿ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡುತ್ತಾ ಬಂದು ರಾತ್ರಿ 10.15 ಗಂಟೆಯ ಸುಮಾರಿಗೆ KSRTC ಬಸ್ ಡಿಪೋ ಹಾಗೂ ಸೊಮೇಶ್ವರ ಕಾಲೋನಿಯ ರಸ್ತೆಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಪೂರ ಬಲಬದಿಗೆ ಓಡಿಸಿ ಎದುರುಗಡೆಯಿಂದ ಬರುತ್ತಿದ್ದ ಮೋಟಾರ್ ಸೈಕಲ್ ಕೆಎ-01-ಇ.ಕ್ಯೂ-7046 ಗೆ ಡಿಕ್ಕಿ ಪಡಿಸಿರುತ್ತಾರೆಂದರೆ ಸರಿಯಲ್ಲ. ಆ ಪರಿಣಾಮ ಸದರಿ ಬೈಕನ್ನು ಚಾಲನೆ ಮಾಡುತ್ತಿದ್ದ ಉಮೇಶ ರವರ ತಲೆಗೆ, ಎದೆಗೆ ತೀವ್ರ ಸ್ವರೂಪದ ಗಾಯವಾಗಿದ್ದು, ನನಗೆ ಮತ್ತು ಚಾಸಾ-3 ಹಾಗೂ ಆರೋಪಿಗೆ ಸಹ ಏಟುಗಳಾಗಿದ್ದು, ನಮ್ಮನ್ನು ಮಾಗಡಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ನಂತರ ನಮ್ಮನ್ನು ಹೆಚ್ಚಿ ನ ಚಿಕಿತ್ಸೆಗಾಗಿ ಬೆಂಗಳೂರಿನ ಸಂಜಯಗಾಂಧಿ ಆಸ್ಪತ್ರೆಗೆ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ನಂತರ ಈ ಬಗ್ಗೆ ಮೃತ ವ್ಯಕ್ತಿಯ ತಂದೆ ಚಾಸಾ-1 ರವರು ದಿಃ 09-02-2023 ರಂದು ದೂರು ನೀಡಿರುತ್ತಾರೆಂದರೆ ಸರಿಯಲ್ಲ. ನಂತರ ದಿನಾಂಕಃ 04-08-2023 ರಂದು ಉಮೇಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆಂದು ನನಗೆ ತಿಳಿದಿರುತ್ತದೆಂದರೆ ಸರಿಯಲ್ಲ. ಸದರಿ ಅಪಘಾತವು ಆರೋಪಿಯ ತಪ್ಪಿ ನಿಂದ ಆಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದು, ನಾನು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ, ಸದರಿ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು** :- ಶ್ರೀ. **ಹೆಚ್.ಎನ್.ಎಸ್.** ವಕೀಲರಿಂದ **ಆರೋಪಿ** ಪರವಾಗಿ :-

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 3971 / 2023**

ಸಿ.ಡಬ್ಲ್ಯೂ :- 03 / ಪಿ.ಡಬ್ಲ್ಯೂ :- 02

| | |
|---|---|
| ಹೆಸರು | **ಕೆಂಪೇಗೌಡ** |
| ತಂದೆ ಹೆಸರು | **ಮೂರ್ತಿ** |
| ವಯಸ್ಸು | **26 ವರ್ಷ** |
| ವೃತ್ತಿ | **ಗಾರೆ ಕೆಲಸ** |
| ವಾಸಸ್ಥಳ | **ವಿಠಲಪುರ** |

**ದಿನಾಂಕಃ 31-07-2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ನನಗೆ ಗಂಗರಾಜು, ಚಾಸಾ-2 ರವರ ಪರಿಚಯ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗಂಗರಾಜು ಎಂದು ಯಾರು ಗೊತ್ತಿರುವುದಿಲ್ಲ, ಆದರೆ ಚಾಸಾ-2 ರವರ ಪರಿಚಯ ಇರುತ್ತದೆ. ಮೃತ ಉಮೇಶ ರವರ ಪರಿಚಯ ನನಗೆ ಇರುವುದಿಲ್ಲ. ನಾನು ಮತ್ತು ಚಾಸಾ-2 ರವರು ಬೆಂಗಳೂರಿನಿಂದ ಕೆಲಸ ಮುಗಿಸಿಕೊಂಡು ಕೊನೆಯ ಬಸ್ಸಿಗೆ ಮಾಗಡಿಗೆ ಬಂದಿದ್ದು, ತಡವಾದ ಕಾರಣದಿಂದ ನಾವು ನಡೆದುಕೊಂಡು ಊರಿಗೆ ಹೋಗುತ್ತಿದ್ದೇವು, ನಾವು ಮಾಗಡಿ ಬಸ್ ನಿಲ್ದಾಣದಿಂದ ವಿಠಲಪುರಕ್ಕೆ ನಡೆದುಕೊಂಡು ಹೋಗುತ್ತಿರುವಾಗ ನಮ್ಮ ಹಿಂದೆಯಿಂದ ಒಂದು ದ್ವಿಚಕ್ರ ವಾಹನ ಬಂದು ನನಗೆ ಮತ್ತು ಚಾಸಾ-2 ರವರಿಗೆ ಹಿಂದೆಯಿಂದ ಡಿಕ್ಕಿ ಪಡಿಸಿರುತ್ತಾರೆ. ಸದರಿ ದ್ವಿಚಕ್ರ ವಾಹನ ನಮ್ಮ ಹಿಂದೆಯಿಂದ ಬರುತ್ತಿದ್ದ ಕಾರಣ ಅದು ಹೇಗೆ ಬರುತ್ತಿತ್ತು ಎಂದು ಹೇಳಲು ಆಗುವುದಿಲ್ಲ. ಅಪಘಾತದ ಪರಿಣಾಮ ನನಗೆ ಕಾಲಿಗೆ ಪೆಟ್ಟಾಗಿದ್ದು, ಚಾಸಾ-2 ರವರಿಗೂ ಕೂಡ ಕಾಲಿಗೆ ಪೆಟ್ಟಾಗಿರುತ್ತದೆ. ನಂತರ ನಮಗೆ ಪ್ರಜ್ಞೆ ಹೋಗಿದ್ದು, ನಂತರ ಬೆಂಗಳೂರಿನ ಆಸ್ಪತ್ರೆಯಲ್ಲಿ ನಮಗೆ ಪ್ರಜ್ಞೆ ಬಂದಿರುತ್ತದೆ. ಈ ಬಗ್ಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು** :- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಪರವಾಗಿ :-**

ದಿನಾಂಕಃ 08-02-2023 ರಂದು ನಾನು ಮತ್ತು ಚಾಸಾ-2 ಹಾಗೂ ಆರೋಪಿಯಾದ ಗಂಗರಾಜು ರವರು ಒಟ್ಟಾಗಿ ಮೂರು ಜನ ಒಂದೇ ಗಾಡಿಯಲ್ಲಿ ಹೋಗೋಣ ಎಂದು ಮಾತನಾಡಿಕೊಂಡು 3 ಜನ ನನ್ನ ಅಣ್ಣನ ಮೋಟಾರ್ ( ಪಲ್ಸರ್ ) ವಾಹನ ಕೆಎ-02-ಜೆಎಂ-0621

ಪಲ್ಸರ್ ಬೈಕಿನಲ್ಲಿ ಕುಳಿತುಕೊಂಡು ಆರೋಪಿ ವಾಹನವನ್ನು ಚಾಲನೆ ಮಾಡುತ್ತಿದ್ದು, ನಾವು ಹಿಂದೆ ಕುಳಿತ್ತಿದ್ದು ಹೋಗುತ್ತಿದ್ದು ರಾತ್ರಿ 9.30 ರ ಸಮಯಕ್ಕೆ ವಿಠಲಪುರಕ್ಕೆ ಹೊರಟು ಮಾಗಡಿ ಕುಣಿಗಲ್ ರಸ್ತಗೆ ಬರುತ್ತಿರುವಾಗ ಆರೋಪಿ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡುತ್ತಾ ಬಂದು ರಾತ್ರಿ 10.15 ಗಂಟೆಯ ಸುಮಾರಿಗೆ KSRTC ಬಸ್ ಡಿಪೋ ಹಾಗೂ ಸೋಮೇಶ್ವರ ಕಾಲೋನಿಯ ರಸ್ತೆಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಪೂರ ಬಲಬದಿಗೆ ಓಡಿಸಿ ಎದುರುಗಡೆಯಿಂದ ಬರುತ್ತಿದ್ದ ಮೋಟಾರ್ ಸೈಕಲ್ ಕೆಎ-01-ಇ.ಕ್ಯೂ-7046 ಗೆ ಡಿಕ್ಕಿ ಪಡಿಸಿರುತ್ತಾರೆಂದರೆ ಸರಿಯಲ್ಲ. ಆ ಪರಿಣಾಮ ಸದರಿ ಬೈಕನ್ನು ಚಾಲನೆ ಮಾಡುತ್ತಿದ್ದ ಉಮೇಶ ರವರ ತಲೆಗೆ, ಎದೆಗೆ ತೀವ್ರ ಸ್ವರೂಪದ ಗಾಯವಾಗಿದ್ದು, ನನಗೆ ಮತ್ತು ಚಾಸಾ-2 ಹಾಗೂ ಆರೋಪಿಗೆ ಸಹ ಏಟುಗಳಾಗಿದ್ದು, ನಮ್ಮನ್ನು ಮಾಗಡಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ನಂತರ ನಮ್ಮನ್ನು ಹೆಚ್ಚಿ ನ ಚಿಕಿತ್ಸೆಗಾಗಿ ಬೆಂಗಳೂರಿನ ಸಂಜಯಗಾಂಧಿ ಆಸ್ಪತ್ರೆಗೆ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ನಂತರ ಈ ಬಗ್ಗೆ ಮೃತ ವ್ಯಕ್ತಿಯ ತಂದೆ ಚಾಸಾ-1 ರವರು ದಿಃ 09-02-2023 ರಂದು ದೂರು ನೀಡಿರುತ್ತಾರೆಂದರೆ ಸರಿಯಲ್ಲ. ನಂತರ ದಿನಾಂಕಃ 04-08-2023 ರಂದು ಉಮೇಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆಂದು ನನಗೆ ತಿಳಿದಿರುತ್ತದೆಂದರೆ ಸರಿಯಲ್ಲ. ಸದರಿ ಅಪಘಾತವು ಆರೋಪಿಯ ತಪ್ಪಿ ನಿಂದ ಆಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದು, ನಾನು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ, ಸದರಿ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು** :- ಶ್ರೀ. **ಹೆಚ್.ಎನ್.ಎಸ್.** ವಕೀಲರಿಂದ **ಆರೋಪಿ** ಪರವಾಗಿ :-

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.